ಸಭೆಯ ಮುಂದಿಡಲಾದ ಕಾಗದ ಪತ್ರಗಳು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ೧೯೭೬ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಶಾಸನದ ೪೭ (ಎ) ನೇ ಕಲಮಿನ ಮೇರೆಗೆ – ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ೧೯೮೬-೮೭ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸದನಕ್ಕೆ ಒಪ್ಪಿಸಲಾಯಿತು. ಈಗ ಅರ್ಜಿಯನ್ನು ಒಪ್ಪಿಸುವುದು.

ಅರ್ಜಿಯನ್ನು ಒಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಹಿಷವಾಡಗಿ ಅಥಣಿ ಸಂಪರ್ಕ ರಸ್ತೆಯನ್ನು ಡಾಂಬರೀಕರಣ ಹಾಗೂ ಸರ್ವರುತು ರಸ್ತೆಯನ್ನಾಗಿ ಮಾಡುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಯಿತು. ಈಗ ಬೇಡಿಕೆಗಳ ಮಂಡನೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಯಲ್ಲಿ ವಿದ್ಯಾರ್ಥಿ ನಾಯಕನಿಗೆ ಹೊಡೆದಿದ್ದಾರೆ. ಎರಡು ಕಾಲು ಮುರಿದಿದ್ದಾರೆ.

ಅಧ್ಯಕ್ಷರು.—ಈಗ ಅದಕ್ಕೆ ಅವಕಾಶ ಇಲ್ಲ. ನೀವು ಮಂತ್ರಿಗಳ ಹತ್ತಿರ ಹೋಗಿ ಹೇಳಿಕೊಳ್ಳಿ.

ಶ್ರೀ ಪಂಪಾಪತಿ.—ವಿದ್ಯಾರ್ಥಿ ನಾಯಕನಿಗೆ ಕಾಲು ಮುರಿದಿದ್ದಾರೆ.

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರೆಕಾರ್ಡ್. ನೀವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಪಂಪಾಪತಿ.—ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

ಅಧ್ಯಕ್ಷರು.—ಮಾತನಾಡುವುದಕ್ಕೆ ರೂಲ್ಸ್ ರೆಗ್ಯುಲೇಷನ್ ಏನೂ ಇಲ್ಲವೇ ?

ಶ್ರೀ ಪಂಪಾಪತಿ.—ಇದು ಲೇಬರ್ ಇಲಾಖೆಗೆ ಬರುವುದಿಲ್ಲ. ಇದು ಪೋಲೀಸ್ ಇಲಾಖೆಗೆ ಬರುತ್ತದೆ. ವಿದ್ಯಾರ್ಥಿ ನಾಯಕನಿಗೆ ಎರಡು ಕಾಲು ಮುರಿದಿದ್ದಾರೆ.

ಶ್ರೀ ವೀರಣ್ಣ.—ಅದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಪಂಪಾಪತಿ.—ಇವತ್ತು ಇವನು ಸಾಯುವ ಪರಿಸ್ಥಿತಿಯಲ್ಲಿ ಇದ್ದಾರೆ. ಬಳ್ಳಾರಿ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿದ್ದಾರೆ.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವೀರಣ್ಣ.—ಇದರ ಬಗ್ಗೆ ಏನು ಮಾಡಬೇಕು ?

ಶ್ರೀ ಪಂಪಾಪತಿ.—ಎನ್‌ಕೌಂಟರ್ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಮಾಡಬೇಕು.

ಅಧ್ಯಕ್ಷರು.—ಈಗ ಮಾತನಾಡುವುದಕ್ಕೆ ಅವಕಾಶ ಇಲ್ಲ. ಮಾನ್ಯ ವೀರಣ್ಣನವರೇ, ನೀವು ಅವರ ಹತ್ತಿರ ವಿಷಯವನ್ನು ತೆಗೆದುಕೊಂಡು ಮಾತನಾಡಿ.

ಶ್ರೀ ವೀರಣ್ಣ.—ಇದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ಪೋಲೀಸ್ ಅಧಿಕಾರಿಗಳಿಗೆ ಸೂಚನೆಗೆ ಕೊಡುತ್ತೇನೆ. ಸಂಬಂಧಪಟ್ಟ ಅಪರಾಧಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ತಾವುನನಗೆ ಡೀಟೇಲ್ ನ್ನು ಕೊಡಿ.

ಅಧ್ಯಕ್ಷರು.—ಅವರಿಗೆ ಡೀಟೇಲ್ಸ್‌ನ್ನು ಕೊಡಿ. ಈಗ ಡಿಮ್ಯಾಂಡ್‌ಗಳ ಮೇಲೆ ಚರ್ಚೆ